ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 158.

ಮೃತಪಟ್ಟ ಕೃಷ್ಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸುಬ್ಬರಾವ್, ನಾರಣಪ್ಪನವರು ಸಹ ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ ಸಹೋದರರು ಆಗಬೇಕೆಂಬ ಹಕ್ಕು ದಾರಿ ಮೇಲೆ ಮಂಜರಾಬಾದ್ ತಾಲ್ಲೂಕು ಯನಗಳೂರು ಹೋಬಳಿ ವೆಳ್ಳಂಗಿ ಸ್ಥಳದ ಸದರೀ ಸುಬ್ಬರಾವ್, ನಾರಣಪ್ಪನವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಕೃಷ್ಣಪ್ಪನವರ ಬೆಂದಗಿ ಬಗ್ಯಾಗಿ ಬರತಕ್ಕ 1,000 ರೂ. ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬರಾವ್, ನಾರಣಪ್ಪನವರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14 ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 162.

ಮೃತಪಟ್ಟ ವರದಾಚಾರ್ಯರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟಾಚಾರ್ಯ, ಮೃತಪಟ್ಟ ಸದರೀ ವರದಾಚಾರ್ಯರಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಬಸವನ ಮೊಹಲಾ ಹಳ್ಳದಬೀದಿ ಸ್ಥಳದ ಸದರೀ ವೆಂಕಟಾಚಾರ್ಯರು ಸೋಲಾಪುರದ ವಾಸಸ್ಥನಾಗಿ ಮೃತಪಟ್ಟ ವರದಾಚಾರ್ಯರ ಜೆಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಾರ್ಯರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವರದಾಚಾರ್ಯ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 165.

ಮೃತಪಟ್ಟ ಯಡಿಯೂರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಪುಟ್ಟಸಾಮಿಕಟ್ಟ, 2ನೇ ಸಿದ್ದಲಿಂಗಪ್ಪ 3ನೇ ಯಡಿಯೂರಪ್ಪ 2–3ನೇ ಮೈನರ್ ಗಾರ್ಡಿಯನ್ 1ನೇ ಪುಟ್ಟಸಾಮಿ ಕಟ್ಟರು, ಮೃತಪಟ್ಟ ಸದರೀ ಯಡಿಯೂರಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯದ ತಾಲ್ಲೂಕು ಆಣೇ ಹೋಬಳಿ ಬನಗರಹಳ್ಳಿ ಸ್ಥಳದ ಸದರೀ ಪುಟ್ಟಸಾಮಿಕಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ಯಡಿಯೂರಪ್ಪನವರ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಸಾಮಿಕಟ್ಟರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಡಿಯೂರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೀದಾರ ಮೈಸೂರು ನಜರ್‌ಬಾದಿನಲ್ಲಿ ಇರುವ ಗೋವಿಂದರಾಜ ಮೊದಲ್ಯಾರ್ರ ವಿಷಯದಲ್ಲಿ—

ಸ॥ 1888ನೇ ಇಸವಿ ದಿವಾಳೀ ಕೇಸ್ ನಂಬರ್ 288.

ಹುಕುಂ.

ಮೇಲ್ಕಂಡ ಗೋವಿಂದರಾಜ ಮೊದಲ್ಯಾರನು ಸಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಗೋವಿಂದರಾಜ ಮೊದಲ್ಯಾರ್ರ ಪರವಾಗಿ 1ನೇ ಗ್ರೇಡ್ ಪ್ಲೀಡರ್ ಮೆ॥ ಸದಾವರಾಯರನ್ನು ಮತ್ತು ಸದರೀಯವನ ಲೇಣೀದಾರ್ರಾದ 1ನೇ ನೋನುಸುಂತರ ಮೊದಲ್ಯಾರ್ ಕಡೆ 1ನೇ ಗ್ರೇಡ್ ಪ್ಲೀಡರ್ ಮೆ॥ ವೆಂಕಟರಾಮಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೀದಾರ್ರುತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ:—2ನೇ ಹುಂಡೀ ಕೃಷ್ಣಮಾಚಾರ್ ಕಡೆ ಮೈ॥ ಗೋವಿಂದರಾಯರು, 3ನೇ ಸರ್ಧಾಮಾನ ಪಂಡಿತ, 4ನೇ ಜಗರ್ನಾಥ್ ಬ್ಯಾಂಕ್, 5ನೇ ರಾಮಚಂದ್ರಬ್ಯಾಂಕ್, 6ನೇ ಕೃಷ್ಣಬಾಯಿ, 7ನೇ ಸರ್ವಜನವರ್ಧನಿಬ್ಯಾಂಕು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗೋವಿಂದರಾಜವೊದಲ್ಯಾರನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಪಾತನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನು ನಿರ್ಬಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜೂ 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಮಲಗ.	ಯಾವಾಗ ದೇಣೆ ತೀರಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಯಿದ್ದರೆ.	ಷರಾ.
1	ಬೆಂಗಳೂರು ಸೋಮಸುಂದರ ಮೊದಲ್ಯಾರ್ ..	3111—8—0	..	..	
2	ಹುಂಡೀ ಕೃಷ್ಣನಾಯರ್	3785—0—0	..	ಆಧಾರ ದಸ್ತಾವೇಜು ಬಾಬತು	
3	ವರ್ದಮಾನ ಪಂಡಿತ	600—0—0	..	ಭೂಮಿ ದಸ್ತಾವೇಜು ಬಾಬತು	

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಂದಸಾಮಿ ಮೊದ್ಲಿಯಾರ್‌ನ ವಿಷಯದಲ್ಲಿ—

ಸ್ಯ 1889ನೇ ಇಸವಿ ದಿವಾಳೀ ಕೇಸ್ ನಂಬರ್ 14.

ಹುಕುಂ.

ಮೇಲ್ಕಂಡ ಕಂದಸಾಮಿಮೊದ್ಲಿಯಾರನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರು ಸುಬ್ಬಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 10ನೇ ಸಿದ್ದಬಸವದೇವರ ತರಫ್ ಅಡ್ವೊಕೇಟರು ರಾಘವಾಚಾರ್ಯರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್‌ಗೆ ನೋಟಿಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ 1ನೇ ಮಧುರಾಕೇಟ್ 2ನೇ ಟೊರ್ಪದಾ ಕೇಟ್ 3ನೇ ಟರ್ನ್‌ಬ್ಯಾಂಕು ಯೇಜಂಟ್ 4ನೇ ಲಕ್ಷ್ಮಯ್ಯಕೆಟ್ಟಿ 5ನೇ ಜಗನ್ನೋಹನಬ್ಯಾಂಕು 6ನೇ ರಾಮಚಂದ್ರ ಬ್ಯಾಂಕು 7ನೇ ಮರಿಯಂಣ 8ನೇ ನಂಜುಂಡಮೊದ್ಲಿ 9ನೇ ಅರುಣಾಚಲ ಮೊದ್ಲಿ 1 ನೇ ಸತ್ಯಜನವರ್ಧನಿ ಬ್ಯಾಂಕು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಕಂದಸಾಮಿಮೊದ್ಲಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗಾತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿರ್ಬಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜೂ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಮಲಗು.	ಯಾವಾಗ ದೇಣೆ ತೀರಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
6	ಮೈಸೂರಲ್ಲಿರುವ ಶ್ರೀರಾಮಚಂದ್ರ ಬ್ಯಾಂಕು ಯೇಜಂಟ್ ..	274 11 7		ಡಿಕ್ರೀ ಬಾಬತು	